Sri A. P. APPANNA.—Will the Government take steps in advance this year to ensure fair price to the paddy growers.

Sri M. V. KRISHNAPPA.—I can assure the Hon'ble Members that though we do not expect the crops to be as good as last year, if the prices were to go below economic levels, Government is stronger than what it was last year because we have experience and money also in the co-operatives which would purchase paddy.

ಶ್ರೀ ಕೆ. ದೇವಯ್ಯ.—ಕೆಲವು ಕಡೆ ಬೆಳೆ ಹಾಳಾಗಿ ಹೋಗಿದೆ. ಕೆಲವು ಕಡೆ ಚನ್ನಾಗಿ ಇದೆ. ಬೆಳೆ ಕಟ್ಟು ಹೋಗಿದ್ದರೆ ಅಲ್ಲಿ ಸರಚಾರ್ಜ್ ವಸೂಲ್ಮಾಡುವುದು ಮರು ವರ್ಷಕ್ಕೆ ಮುಂದಕ್ಕೆ ಹಾಕು ತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಮೊದಲೇ ಹೇಳಿದ ಹಾಗೆ ಕೆಲವು ಕಡೆ ತೊಂದರೆ ಬಂದಿದೆ. ಒಟ್ಟಿನಲ್ಲಿ ಫೈನಲ್ ಎಸ್ಟಿಮೇಟು ಡಿಸೆಂಬರಿನಲ್ಲಿ ಗೊತ್ತಾದ ಮೇಲೆ ತೀರ್ಮಾನಕ್ಕೆ ಬಂದು ರೆಮಿಶನ್ ಸಸ್ಪೆನ್ಶನ್ ಯಾವುದು ಕೊಡಬೇಕು ಯೋಚನೆ ಮಾಡುತ್ತೇವೆ.

Total amount of Surcharge to be collected from South Kanara District for the year 1963-64.

* *Q.*—903. Sri SANJEEVANATH AIKALA (Suratkal).—

Will the Government be pleased to state :—

(*a*) the total amount of Surcharge to be collected from the South Kanara District for the year 1963-64 as per Mysore Land Revenue (Surcharge) Amendment Act, 1962;

(*b*) the total amount of Surcharge collected up to 31st July 1963 in the said District;

(*c*) the steps taken by the Government to collect the Surcharges due;

(*d*) the number of complaints received by them regarding the methods of collection by the concerned Government Officials ?

A.—Sri M. V. KRISHNAPPA (Minister for Revenue).—

(*a*) Rs. 23,24,835-59 nP.

(*b*) Rs. 8,60,499-73 nP.

(*c*) Coercive action is taken against the land holders who are in a position to pay without being put to any hardship, when other ordinary methods fail.

(*d*) Nil.

Sri SANJEEVANATH AIKALA.—Sir, I want to bring to your notice that my name is repeatedly being misspelt. It should be spelt as 'Aikala' and not 'Ikala'.

Mr. SPEAKER.—I will take a serious notice of it.

Sri SANJEEVANATH AIKALA.—Is it not a fact that Government sought information as to why over 15 lakhs were outstanding as arrears in surcharge. What are the reasons made out by the Officers of Government ?

ಶ್ರೀ ಸಂಜೀವನಾಥ ಐಕಳ.—ಸರಚಾರ್ಜ ವಸೂರ್ಮಾಡುವುದು ಕಷ್ಟ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯದಷ್ಟೇ ಸರಚಾರ್ಜ ಕೊಡಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 23 ಲಕ್ಷ 24 ಸಾವಿರ ಚಿಲ್ಲರೆ ಕೊಡಬೇಕಾಗುತ್ತದೆ. ಜುಲೈ ಕೊನೆ ವರೆಗೆ ಎಂಟು ಲಕ್ಷ ವಸೂರಾಗಿದೆ. ಮಿಕ್ಕಿದ್ದು ವಸೂರಾಗುತ್ತಾ ಇದೆ. ಸ್ವಲ್ಪ ಕಷ್ಟವಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಸರಚಾರ್ಜ ವಸೂರ್ಮಾಡುವುದು ನಮ್ಮ ಜಿಲ್ಲೆಯಲ್ಲಿ ಮಾನ್ಯಾ ಮಾಡ ಬೇಕೆಂದು ಮನವಿಗಳು ಕಾಗದಗಳು ತಮಗೆ ಬಂದಿವೆ ಅಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಧರ್ಮ ಸಾಮ್ರಾಜ್ಯ, ಮಂಜಯ್ಯಶೆಟ್ಟಿ ಇನ್ನೂ ಅನೇಕ ಸದಸ್ಯರು ನನಗೆ ನೇರವಾಗಿ ಕಾಗದ ಬರೆದಿದ್ದಾರೆ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ನಮ್ಮ ಜಿಲ್ಲೆಯಲ್ಲಿ ಕಂದಾಯ ಚನ್ನಾಗಿ ವಸೂರಾಗುತ್ತದೆ, ಬಾಕಿ ಇರುವುದಿಲ್ಲ ಎಂದು ಹೇಳಿದಿರಿ. ರೈತರಿಗೆ ಸರಚಾರ್ಜ ಕೊಡುವುದು ಕಷ್ಟವಾಗುತ್ತದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರಚಾರ್ಜ ವಸೂರಾಗುವುದು ಕಷ್ಟ ಇದೆ. ಅದು ಸುಲಭವಾಗಿ ನಡೆಯುತ್ತದೆ ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಕೊಡುವ ಶಕ್ತಿ ಇದ್ದವರ ಕಡೆಯಿಂದ ಕಡ್ಡಾಯವಾಗಿ ವಸೂರ್ಮಾಡಿ ಮತ್ತ ಕೊಡುವ ಶಕ್ತಿ ಇಲ್ಲದವರಿಗೆ ಟೈಂ ಕೊಡಿ ಎಂದು ಹೇಳಿದ್ದೇವೆ, ಬಡವರಿಗೆ ತೊಂದರೆಯಾಗಬಾರದೆಂದು ಕೊಡುವ ಶಕ್ತಿ ಇಲ್ಲದವರಿಗೆ ಟೈಂ ಕೊಡಿ ಎಂದು ಹೇಳಿದೆ.

ಶ್ರೀ ಟಿ. ಜಿ. ನತ್ಯನಾರಾಯಣ.—ಬಳ್ಳಾರಿ ಜಿಲ್ಲೆಯಲ್ಲಿ ಐದಾರು ವರ್ಷದಿಂದ ಮಳೆಯಾಗಿಲ್ಲ. ಆದ್ದರಿಂದ ಅಲ್ಲಿ ಈ ಬಗ್ಗೆ ಏನು ಮಾಡುತ್ತೀರಿ ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಮಳೆಯಾಗುತ್ತಾ ಇದೆ. ಬಹುತಃ ಈ ವರ್ಷ ಕೊಟ್ಟು ಬಿಡುತ್ತಾರೆ.

2-00 P.M.

ಶ್ರೀ ಎ. ಕೃಷ್ಣಶೆಟ್ಟಿ.—ಸರ್ಚಾರ್ಜ್ ಬರುತ್ತದೆ ಎಂದು ಹೇಳಿ ಮಂಜಯ್ಯ ಶೆಟ್ಟರು, ಧರ್ಮ ಸಾಂರಾಜ್ಯ ಅವರು ಈ ಸಭೆಯಲ್ಲಿ ಒಪ್ಪಿದ್ದಾರೆಯೋ ಇಲ್ಲವೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಮಾನ್ಯ ಸಭೆ ಒಪ್ಪಿದ ಮೇಲೆ ತಾವೂ ಒಪ್ಪಿದ ಹಾಗೆಯೇ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಶಕ್ತಿ ಇದ್ದವರಿಂದ ಈ ಸರ್ಚಾರ್ಜ್ ವಸೂಲುಮಾಡಬೇಕು, ಶಕ್ತಿ ಇಲ್ಲದವರನ್ನು ಬಿಡಬೇಕು ಎಂದ ಮೇಲೆ ಶಕ್ತಿ ಇದ್ದವರು ಎಂಬುದನ್ನು ಹೇಗೆ ಡಿಫೈನ್ ಮಾಡಿ ತಮ್ಮ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಸ್ಥಳೀಯ ಅಧಿಕಾರಿಗಳಿಗೆ ಅರ್ಥವಾಗುತ್ತದೆ. ಕೆಲವು ಜನ ದೊಡ್ಡ ರೈತರು ಪೂರ್ವದಿಂದಲೂ ಸಲೀಸಾಗಿ ಕೊಡುತ್ತಾ ಇರುತ್ತಾರೆ. ಅವರಿಂದ ವಸೂಲು ಮಾಡಿಕೊಳ್ಳುತ್ತಾರೆ.

Sri Y. MANJAIAH SHETTY.—The Hon'ble Minister has expressed great sympathy with regard to levy of land revenue surcharge in South Kanara. May I know what steps the Minister has taken to translate them into action ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಂಕದವರ ಮುಂದೆ ಸುಖ ದುಃಖ ಹೇಳಿಕೊಂಡ ಹಾಗೆ ಕಂದಾಯದ ಮಂತ್ರಿ ಎಷ್ಟೇ ಕನಿಕರ ತೋರಿಸಿದರೂ ಕಂದಾಯ ವಸೂಲು ಮಾಡಲೇ ಬೇಕಾಗುತ್ತದೆ. ಯಾರ್ಯಾರ ಹತ್ತಿರ ಕಡ್ಡಾಯವಾಗಿ ವಸೂಲು ಮಾಡಿಕೊಳ್ಳಬೇಕು ಅವರ ಹತ್ತಿರ ವಸೂಲು ಮಾಡಿ ಕೊಳ್ಳುತ್ತಾರೆ. ಬಡವರಾದರೆ ಸ್ವಲ್ಪ ಟೈಂ ಕೊಟ್ಟು ವಸೂಲು ಮಾಡುತ್ತಾ ಇದ್ದಾರೆ. ಅವರ ಮೇಲೆ ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 ಲಕ್ಷ ಚಿಲ್ಲರೆ ರೂಪಾಯಿ ಸರ್ಚಾರ್ಜ್ ವಸೂರಾಗುತ್ತದೆ ಎಂದು ಹೇಳುತ್ತೀರಿ. ಆ ಬ್ರೇಕ್ ಅಪ್ ಫಿಗರ್ ತಾಲ್ಲೂಕು ಪ್ರಕಾರ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ, ಬೇಕಾದರೆ ಅದನ್ನು ಕೊಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಯಾರ್ಯಾರ ಹತ್ತಿರ ಸಾಮರ್ಥ್ಯ ಇದೆ ಅವರ ಹತ್ತಿರ ವಸೂಲು ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದ್ದೇವೆ ಎಂದು ಹೇಳಿದಿರಿ. ಯಾರ್ಯಾರು ದೊಡ್ಡ ಭೂಮಾಲೀಕರು ಇದ್ದಾರೆ ಅವರ ಗೇಜಿಗೆ ಹೋಗಬೇಡಿ. ಅವರಿಂದ ರಿಟ್ ಪೈಲ್ ಬರುತ್ತದೆ. ಆದ್ದರಿಂದ ಯಾರ್ಯಾರು ಪಾಪರ್ ಇದ್ದಾರೆ, ಅವರ ಹತ್ತಿರ ವಸೂಲು ಮಾಡಿ ಎಂದು ತಾವು ಆದೇಶ ಕೊಡ ಲಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥಾದೇನೂ ನಾವು ಕೊಟ್ಟ ಹಾಗೆ ನನಗೆ ಜ್ಞಾಪಕ ಇಲ್ಲ.

Sri SANJEEVANATH AIKALA.—Is it a fact that the Shanbogues and Patels are absolutely non-co-operating with the collection of surcharge in South Kanara District ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ, ಇಲ್ಲ, ಪಟೇಲ್ ಶ್ಯಾನುಭೋಗರು ಕಷ್ಟಪಟ್ಟು ವಸೂಲು ಮಾಡುತ್ತಾ ಇದ್ದಾರೆ.

ಶ್ರೀ ಅಂದಾನಯ್ಯ.—ಕಾಂಗ್ರೆಸ್ ಪಾರ್ಟಿಯವರೇ ಹೆಚ್ಚು ಮಂದಿ ಸರ್ಚಾರ್ಜ್ ಹೋಗಬೇಕೆಂದು ಕೇಳುತ್ತಾ ಇರುವುದರಿಂದ ಮುಂದಿನ ವರ್ಷವಾದರೂ ಇದನ್ನು ತೆಗೆಯಲಕ್ಕೆ ತಾವು ಪ್ರಯತ್ನ ಪಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಒಪ್ಪಿಗೆ ಕೊಟ್ಟಿರುವುದೇ ಎರಡು ವರ್ಷಕ್ಕೆ. ಈಗಾಗಲೇ ಒಂದು ವರ್ಷ ಮುಗಿದು ಹೋಯಿತು. ಇನ್ನು ಇರುವುದು ಒಂದು ವರ್ಷ. ಅದಾದ ಮೇಲೆ ಇದು ತನ್ನಷ್ಟಕ್ಕೆ ತಾನೇ ಹೊರಟು ಹೋಗುತ್ತದೆ.

ಶ್ರೀ ಜಿ. ಎ. ಗೌಡ.—8 ಲಕ್ಷ 60 ಸಾವಿರ ಚಿಲ್ಲರೆ ರೂಪಾಯಿ ಪಾಪದ ಜನ ಕೊಟ್ಟಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ದಕ್ಷಿಣ ಕನ್ನಡ ಜನರು ಪಾಪ ಮಾಡಿದವರು ಅಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ, ದೊಡ್ಡವರ ಹತ್ತಿರ ಬಹಳ ವಸೂಲು ನಡೆದಿದೆ. ಬಡವರಿಂದಲೂ ಕೂಡ, ತೊಂದರೆ ಇಲ್ಲದೆ ಕೊಟ್ಟಂತಹವರಿಂದ ತೆಗೆದುಕೊಂಡಿದ್ದಾರೆ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯ ಮೂರು ತಾಲ್ಲೂಕುಗಳು ಕೇರಳಕ್ಕೆ ಹೊಂದಿಕೊಂಡಿರುವುದರಿಂದ ಅಲ್ಲಿ ಕಡಿಮೆ ಇದ್ದು ಇಲ್ಲಿ ಹೆಚ್ಚು ಇರುವಾಗ ಜನರಲ್ಲಿ ಅತೃಪ್ತಿ ಬಂದಿದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನನಗೆ ಗೊತ್ತಿರುವ ಹಾಗೆ ಕೇರಳದಲ್ಲಿ ಇಲ್ಲರುವಂತೆಯೇ ಅವರೂ ವಸೂಲು ಮಾಡುತ್ತಾ ಇದ್ದಾರೆ, ಬಹುಶಃ ಅವರ ಕಡಮೆ ಇಟ್ಟುಕೊಂಡಿದ್ದರೆ ಬೇಗ ಜಾಸ್ತಿ ಮಾಡುವುದಕ್ಕೆ ಅವರೂ ಕೂಡ ಯೋಚನೆ ಮಾಡುತ್ತಾರೆ.

ಶ್ರೀ ಬಿ ಭಾಸ್ಕರ ಶೆಟ್ಟಿ.—ರಿಟ್ ಫೈಲ್ ಮಾಡಿದಾಗ ನೀವು ಮಾಡಿದ್ದು ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂದು ಸ್ವೀ ಕೊಟ್ಟಿದ್ದಾರೆ, ಆ ದಿ ರಿಟ್ ಫೈಲ್ ಇತ್ಯರ್ಥವಾಗುವವರೆಗೂ ದಕ್ಷಿಣ ಕನ್ನಡ ಜಿಲ್ಲೆಯವರು ವಸೂಲು ಮಾಡುತ್ತ ಇರುವುದನ್ನು ಇನ್ನಾದರೂ ನಿಲ್ಲಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವಷ್ಟು ಕಷ್ಟ ಇಲ್ಲ. ಪಾಪ ದಕ್ಷಿಣ ಕನ್ನಡದ ಜನ ಬಾಕೇ ಇಲ್ಲದೇ ಕಂದಾಯವನ್ನು ಕೊಡುತ್ತಾ ಇದ್ದಾರೆ, ಅದೇ ರೀತಿ ಸರ್ಚಾರ್ಜ್‌ನ್ನು ಕೊಡುತ್ತಾ ಇದ್ದಾರೆ. ಮಧ್ಯೆ ಮಧ್ಯೆ ಮಾನ್ಯ ಸದಸ್ಯರು ಬರೆಯುತ್ತಾ ಇದ್ದಾರೆ, ತಾವು ತಿಳಿದುಕೊಂಡಿರುವಷ್ಟು ಮಟ್ಟಿಗೆ ಪಾಪದ ಜನ ಅವರು ಅಲ್ಲ, ಕಂದಾಯ ಕೊಡುತ್ತಾ ಇದ್ದಾರೆ ವಸೂಲು ನಡೆಯುತ್ತಾ ಇದೆ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದವರು ಅಭಾವ ಪರಿಸ್ಥಿತಿ ಎಂದು ಎಲ್ಲೆಲ್ಲ ಡಿಕ್ಲೇರ್ ಮಾಡಿದ್ದಾರೋ ಅಲ್ಲೆಲ್ಲಾ ಈ ಸರ್ಚಾರ್ಜ್ ವಸೂಲು ಮಾಡದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂತಹ ಕಡೆಗಳಲೆಲ್ಲಾ ರಮಿಷನ್, ಸಸ್ಪೆನ್‌ಷನ್ ಕೊಟ್ಟಿದೆ. ಕಂದಾಯ ಎಷ್ಟು ವಸೂಲು ಮಾಡುತ್ತೇವೆಯೋ ಅಷ್ಟೇ ಇದೂ ವಸೂಲು ಮಾಡುವುದರಿಂದ ಅದೂ ಕೂಡ ಆಟೋಮ್ಯಾಟಿಕ್ ಆಗಿ ಆಗುತ್ತದೆ.

ಶ್ರೀ ಎಸ್. ಡಿ. ಸಾಂಬಾರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಸರಿಯಾಗಿ ಮಳೆ ಬರದೆ ಸಂಪೂರ್ಣ ಬೆಳೆ ಕೆಟ್ಟುಹೋಗಿದೆ. ಆದ್ದರಿಂದ ಆ ಬೆಟ್ಟದ ಬೆಳೆಗಳಿಗೆ ಸರ್ಚಾರ್ಜ್ ವಸೂಲು ಮಾಡದೇ ಏನಾಯಿತಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಟ್ಟಿನಲ್ಲಿ ಕಂದಾಯ ವಸೂಲು ಮಾಡುವುದು ಬಹಳ ಕಷ್ಟದ ಕೆಲಸ, ಸಂತೋಷವಾಗಿ ಯಾರೂ ಕೊಡುತ್ತಾ ಇಲ್ಲ. ನಿಜವಾಗಿಯೂ ಎಲ್ಲಿ ಪರಿಸ್ಥಿತಿ ಕೆಟ್ಟಿದೆ ಎಂಬುದನ್ನು ತಿಳಿದುಕೊಂಡು ಅಲ್ಲಿ ಜನಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ. ಕೃಷ್ಣಶೆಟ್ಟಿ.—ಪಟೇಲರು ಮತ್ತು ಶ್ಯಾನುಭೋಗರು ಒತ್ತಾಯ ಮಾಡಿ ಈ ಸರ್ಚಾರ್ಜ್ ವಸೂಲು ಮಾಡಿಕೊಟ್ಟರೆ ಅವರಿಗೆ ಏನಾದರೂ ಕಾರ್ಯದ ಅನುಕೂಲತೆ ಮಾಡಿಕೊಡುತ್ತೀವೆ ಎಂದು ಹೇಳಿ ತಾವು ಆಶ್ವಾಸನೆ ಕೊಟ್ಟಿದ್ದೀರಾ ಎಂದು ಹೇಳುತ್ತಾರೆ, ಅದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತರಹ ರೈತರಿಗೆ ತೊಂದರೆ ಕೊಟ್ಟು ವಸೂಲು ಮಾಡುವುದಕ್ಕೆ ಸರ್ಕಾರದವರು ಯಾವ ತರಹವೂ ಪ್ರೋತ್ಸಾಹವನ್ನೂ ಕೊಡುತ್ತಿಲ್ಲ, ಏನು ಕಾನೂನು ಪ್ರಕಾರ ಮಾಡಬೇಕೋ ಆ ರೀತಿ ವಸೂಲಿ ಕ್ರಮ ನಡೆಸುತ್ತಾರೆ. ಅದರ ಪ್ರಕಾರ ಅವರಿಗೆ ಕಮಿಷನ್ ಏನಿದೆಯೋ ಅದು ಸಿಕ್ಕುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಯಾರು ಆಗಸ್ಟ್‌ವರೆಗೂ ಸರ್ಚಾರ್ಜ್ ಕೊಡಲಿಲ್ಲ. ಅವರಿಂದ ಆಗಸ್ಟ್ ಒಂದರಿಂದ ಶೇಕಡ 6 ರಂತೆ ಬಡ್ಡಿ ವಸೂಲು ಮಾಡಬೇಕೆಂದು ತಾವು ತಮ್ಮ ಅಧಿಕಾರಿಗಳಿಗೇನಾದರೂ ಆದೇಶ ಕೊಟ್ಟಿದ್ದೀರಾ ? ಕೊಟ್ಟಿದ್ದ ಪಕ್ಷದಲ್ಲಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಆ ರೀತಿ ಯಾವ ಆದೇಶವನ್ನೂ ಕೊಟ್ಟಿಲ್ಲ. ಈಗಿರುವ ಸ್ಯಾಟ್ಯೂಂಡಿಂಗ್ ಆರ್ಡರ್ಸ್ ಪ್ರಕಾರ ಕಂದಾಯ ಬಾಕಿ ಇದ್ದರೆ ಅದರ ಮೇಲೆ ಶೇಕಡ 6 ರಂತೆ ಬಡ್ಡಿ ಹಾಕಬೇಕೆಂದು ಇದೆ. ಅದನ್ನು ನಾವು ಮಾಡಿಲ್ಲ ಹಿಂದೆ ಸರ್ಕಾರ ಮಾಡಿದ್ದೇ ಇವತ್ತಿಗೂ ನಡೆದು ಕೊಂಡು ಬಂದಿದೆ.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಕೋಲಾರ ಜಿಲ್ಲೆಯಲ್ಲೂ ಕೂಡ ಈ ಸಾರಿ ಸರಿಯಾಗಿ ಮಳೆ ಯಾಗಿಲ್ಲ. ಅಲ್ಲಿಗೂ ಇದನ್ನು ಅನ್ವಯಿಸುತ್ತೀರಾ ?

ಅಧ್ಯಕ್ಷರು.—ಕೋಲಾರದ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಜಿ. ವಿ. ಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಗ್ಯುಲರ್ ಅಸೆಸ್‌ಮೆಂಟ್ ಬಾಕಿ ಇದೆಯೇ ? ಇಲ್ಲದೇ ಇದ್ದ ಮೇಲೆ ಸರ್ಚಾರ್ಜ್ ಏಕೆ ಬಾಕಿ ಉಳಿಸಿಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಾ ಜಿಲ್ಲೆಗಳಿಗಿಂತಲೂ ಬಾಕಿ ಇಲ್ಲದೇ ಕೊಡುವಂತಹ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೊದಲನೆಯದು. ಪ್ರತಿ ವರ್ಷವೂ ಪೂರ್ತಿ ಕೊಟ್ಟಿರುವುದು ತಮಗೇ ಗೊತ್ತಿದೆ. ಅಲ್ಲಿ ಕಂದಾಯ ವಸೂಲು ಆಗುವುದು ಜನವರಿಯಿಂದ ಜನವರಿಯವರಿಗೆ. ಈ ಆಕ್ಟ್ ಪಾಸ್ ಆಗಿ ವಸೂಲು ಮಾಡುವುದಕ್ಕೆ ಶುರು ಮಾಡಿದ್ದು ಜೂನ್‌ನಿಂದ. ಆದ್ದರಿಂದ ಇದನ್ನು ವಸೂಲು ಮಾಡುವುದಕ್ಕೆ ಆಗಿಲ್ಲ. ಅಷ್ಟು ಹೊತ್ತಿಗೆ ಕಂದಾಯವನ್ನೆಲ್ಲಾ ಅವರು ಕೊಟ್ಟುಬಿಟ್ಟಿದ್ದರು.

Mr. SPEAKER.—Question hour is over.

QUESTIONS FOR ANSWERS ON THE DAY
(but not taken up)

Improving the Capacity of Marlavadi Tank in Kanakapura Taluk.

*Q.—775. **Sri S. KARIAPPA** (Kanakapura).—

Will the Government be pleased to state :—

(*a*) whether it is not a fact that the Marlavadi Tank in Kanakapura Taluk has the capacity of about 900 units of water while the atchkat is more than 2,000 acres ;

(*b*) the steps they have been contemplating to improve the capacity of the Tank ?

A.—**Sri ALUR HANUMANTHAPPA** (Deputy Minister for Minor Irrigation).—

(*a*) No.

(*b*) No need to increase the capacity of the tank.